ಸಿಸಿ ಸಂಖ್ಯೆ **324/2023** ಡಿ.ಡಬ್ಲ್ಯೂ- **1**

ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾದ ದಿನಾಂಕ **04.04.2025**

ಪಾಟೀ ಸವಾಲು : ಶ್ರೀ **TNC** ನ್ಯಾಯಾವಾದಿಗಳಿಂದ:

ನಮ್ಮ ಕುಟುಂಬದಲ್ಲಿ ನಾವು ಬಿ.ಪಿ.ಎಲ್ ಪಡಿತರ ಚೀಟಿ ಯನ್ನು ಹೊಂದಿರುತ್ತೇವೆ. ನಿಪಿ.7 ಮತ್ತು 8 ರ ಜಮೀನುಗಳ ಮೇಲೆ ಸಾಲ ಇದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಬೆಳೆ ಸಾಲವನ್ನು ಪಡೆದುಕೊಂಡಿರುವುದಾಗಿ ನುಡಿಯುತ್ತಾರೆ. ಪ್ರತಿ ವರ್ಷ ಬೆಳೆ ಸಾಲವನ್ನು ಮರುಪಾವತಿ ಮಾಡುತ್ತೇನೆ. ಸುಮಾರು 2 ಚೆಕ್ ಪ್ರಕರಣಗಳನ್ನು ಮತ್ತು 2 ಜಮೀನಿಗೆ ಸಂಬಂಧಿಸಿದ ಪ್ರಕರಣವನ್ನು ನಾನು ಸಲ್ಲಿಸಿರುತ್ತೇನೆ. ಈ ಪ್ರಕರಣವನ್ನು ಹೊರಸು ಪಡಿಸಿ ಬೇರೆ ಯಾವುದೇ ಚೆಕ್ ಪ್ರಕರಣಗಳು ಬಾಕಿ ಇರುವುದಿಲ್ಲ. 2023 ರಲ್ಲಿ ನಾನು ಯಾವುದೇ ಚೆಕ್ ಪ್ರಕರಣವನ್ನು ದಾಖಲಿಸಿರುವುದಿಲ್ಲ.

2. ಸಿಸಿ 194/2023 ರಂತೆ ನಾಗರಾಜುರವರ ವಿರುದ್ಧ 2,20,000 ರೂ.ಗಳಿಗೆ ಚೆಕ್ ಪ್ರಕರಣವನ್ನು ದಾಖಲಿಸಿದ್ದೆ ಎಂದರೆ ಸರಿ. ಸಾಕ್ಷಿ ಮುಂದುವರೆದು 2,00,000 ಲಕ್ಷಕ್ಕೆ ಸದರಿ ಪ್ರಕರಣವು ರಾಜಿ ಆಗಿದೆ ಎಂದು ನುಡಿಯುತ್ತಾರೆ. ನಾನು ಸುಮಾರು 22 ಚೆಕ್ ಪ್ರಕರಣವನ್ನು ಬೇರೆ ಬೇರೆ ವ್ಯಕ್ತಿಗಳ ವಿರುದ್ಧ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. 2022 ರಲ್ಲಿ ನಾನು ಯಾವುದೇ ಚೆಕ್ ಪ್ರಕರಣವನ್ನು ದಾಖಲಿಸಿರುವುದಿಲ್ಲ. ಸಿಸಿ ಸಂಖ್ಯೆ 897/2022 ರಂತೆ ಸಯಿದ್ ಅಬಿಜುಲ್ಲಖಾನ್ ರವರು ವಿರುದ್ಧ ನಾನು ಚೆಕ್ ಪ್ರಕರಣವನ್ನು ದಾಖಲಿಸಿರುವುದಿಲ್ಲ. ಸಿಸಿ ಸಂಖ್ಯೆ 491/2022 ರಂತೆ ನಿಂಗಮ್ಮ ರವರ ವಿರುದ್ಧ ನಾನು ಚೆಕ್ ಪ್ರಕರಣವನ್ನು ದಾಖಲಿಸಿರುವುದಿಲ್ಲ. ಸಿಸಿ 773/2022 ರಂತೆ ತರ್‌ಬೇಸ್ ಪಾಶ ರವರ ವಿರುದ್ಧ ನಾನು ಚೆಕ್ ಪ್ರಕರಣವನ್ನು ದಾಖಲಿಸಿರುವುದಿಲ್ಲ.

3. ಶಾರದಮ್ಮ ಮತ್ತು ದೇವಿರಮ್ಮರವರ ವಿರುದ್ಧ ಕ್ರಯದ ಕರಾರು ಪತ್ರಕ್ಕೆ ಸಂಬಂಧಿಸಿದಂತೆ 2 ದಾವೆಗಳನ್ನು ಸಲ್ಲಿಸಿರುತ್ತೇನೆ. ದೇವಿರಮ್ಮರವರ

ವಿರುದ್ಧ ಸಲ್ಲಿಸಿದ್ದ ದಾವೆಯು ಎರಡು ಲಕ್ಷದ ಹತ್ತು ಸಾವಿರ ರೂ.ಗಳಿಗೆ ರಾಜಿಯಾಗಿರುತ್ತದೆ. ರಮೇಶ್ ರವರ ವಿರುದ್ಧ ಆಧಾರ್ ಪತ್ರಕ್ಕೆ ಸಂಬಂಧಿಸಿದಂತೆ ದಾವೆಯನ್ನು ಸಲ್ಲಿಸಿದ್ದೆ ಸದರಿ ದಾವೆಯು ಮೂರು ಲಕ್ಷದ ಎಪ್ಪತ್ತು ಸಾವಿರ ರೂ.ಗಳಿಗೆ ರಾಜಿಯಾಗಿರುತ್ತದೆ.

4. ಆರೋಪಿಗೆ 10 ಎಕರೆಗಿಂತ ಹೆಚ್ಚು ಜಮೀನು ಇದೆ ಎಂದರೆ ಎಷ್ಟು ಜಮೀನು ಇದೆ ಎಂದು ನನಗೆ ಗೊತ್ತಿಲ್ಲ. ಜಮೀನಿಂದ ಸುಮಾರು ವಾರ್ಷಿಕವಾಗಿ 5-6 ಲಕ್ಷ ಆದಾಯವು ಆರೋಪಿಗೆ  ಬರುವುದು ನನಗೆ ಗೊತ್ತಿಲ್ಲ. ಆರೋಪಿಗೆ ಸಾಕಷ್ಟು ಆದಾಯ ಇರುವುದರಿಂದ ಸಾಲ ಮಾಡುವ ಅವಶ್ಯಕತೆ ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ.9 ರಂತೆ ಹಾಜರು ಪಡಿಸಿರುವ ಕ್ರಯ ಪತ್ರದ ಸ್ವತ್ತು ಖಾಲಿ ನಿವೇಶನವಾಗಿದ್ದು ಅದರಿಂದ ಯಾವುದೇ ಆದಾಯ ನನಗೆ ಬರುವುದಿಲ್ಲ.ಸದರಿ ಕ್ರಯ ಪತ್ರದ ಸ್ವತ್ತಿನ ಪಕ್ಕದಲ್ಲಿ ಆರೋಪಿ ಕುಟುಂಬಕ್ಕೆ ಸೇರಿದ ನಿವೇಶನ ಇದೆ ಎಂದರೆ ಸರಿ. ಸದರಿ ಆರೋಪಿ ಕುಟುಂಬಕ್ಕೆ ಸೇರಿದ  ಖಾಲಿ ನಿವೇಶನವನ್ನು ಲಪಾಟಾಯಿಸುವ ಉದ್ದೇಶದಿಂದ ಈ ಸುಳ್ಳು ಪ್ರಕರಣವನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಹಾಕಿರುವ ಹಣಕಾಸಿನ ಪ್ರಕರಣಗಳಲ್ಲಿ ವಿಶ್ವಾಸದಿಂದ ಸಾಲ ಕೊಟ್ಟಿರುವುದಾಗಿ ಹೇಳಿರುತ್ತೇನೆ ಎಂದರೆ ಸರಿ. ನಾನು ಲೇವಾ-ದೇವಿ ನಡೆಸಲು ಪರವಾನಗೆಯನ್ನು ಪಡೆದಿರುವುದಿಲ್ಲ. ನನಗೆ ಮೂರು ಲಕ್ಷದ ಐವತ್ತು ಸಾವಿರ ರೂ.ಗಳನ್ನು ಸಾಲ ಕೊಡುವ ಸಾಮಾರ್ಥ್ಯ ಇಲ್ಲದೆ ಇದ್ದರು ಸಹಾ ಈ ಸುಳ್ಳು ಚೆಕ್ ಪ್ರುರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

ಸಾ. ಹೇ. ಬೆ. ಮಾಡಿಸಲಾಯಿತು.

ಓ.ಹೇ.ಕೇ.ಸ.ಇದೆ

ಅಪರ ಸಿವಿಲ್ ನ್ಯಾಯಾಧೀಶರು
ನಾಗಮಂಗಲ